ತಿಎ
19/01-2022

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2347** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **29.03.2021** |
| **ಉತ್ತರಿಸಬೇಕಾದ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು** |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ನೀಡಲಾಗುತ್ತಿರುವ ಲಸಿಕೆಗಾಗಿ ಈ ವರೆಗೆ ಸರ್ಕಾರದ ವತಿಯಿಂದ ಮಾಡಲಾಗಿರುವ ವೆಚ್ಚವೆಷ್ಟು; ಈ ಲಸಿಕೆಯ ಅವಧಿ ಮೀರುವ (Expiry) ಸಮಯ ಎಷ್ಟು; ಇಲ್ಲಿಯವರೆಗೆ ಉಪಯೋಗಿಸಿದೇ ಅವುಗಳ ಅವಧಿ ಮೀರಿದ ಕಾರಣಕ್ಕೆ ನಾಶಪಡಿಸಿದ ಲಸಿಕೆಗಳ ಸಂಖ್ಯೆ ಎಷ್ಟು; ನಷ್ಟದ ಒಟ್ಟು ಮೊತ್ತವೆಷ್ಟು; | ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ನೀಡಲಾಗುತ್ತಿರುವ ಲಸಿಕೆಗಳು ಭಾರತ ಸರ್ಕಾರದಿಂದ ನೇರವಾಗಿ ಸರಬರಾಜಾಗಿದೆ. ಈ ಲಸಿಕೆಗಳ Expiry ಮೇ, ಜೂನ್ ಮತ್ತು ಜುಲೈ-2021ಗಳಾಗಿರುತ್ತವೆ. ಇಲ್ಲಿಯವರೆಗೆ ಉಪಯೋಗಿಸದೇ ಅವುಗಳ ಅವಧಿ ಮೀರಿದ ಕಾರಣಕ್ಕೆ ಯಾವುದೇ ಲಸಿಕೆಗಳನ್ನು ನಾಶಪಡಿಸಿಲ್ಲ. |
| ಆ) | ಅತೀ ಕಡಿಮೆ ಬಾಳಿಕೆ ಅವಧಿಯನ್ನು (Expiry) ಹೊಂದಿರುವ ಲಸಿಕೆಗಳನ್ನು ಕಾಲಮಿತಿಯಲ್ಲಿ ಸಮುದಾಯಕ್ಕೆ ನೀಡುವ ನಿಟ್ಟಿನಲ್ಲಿ ಸರ್ಕಾರ ಹಾಕಿಕೊಂಡಿರುವ ಯೋಜನೆ ಹಾಗೂ ಸಿದ್ಧತೆಗಳಾವುವು; | ಭಾರತ ಸರ್ಕಾರದಿಂದ ಸರಬರಾಜಾಗಿರುವ ಎಲ್ಲಾ ಲಸಿಕೆಗಳನ್ನು First Expiry first out (FEFO) ಮಾದರಿಯಲ್ಲಿ ಲಸಿಕೆಗಳನ್ನು ಬಳಸಲಾಗುತ್ತಿದೆ. ಆದ್ದರಿಂದ ಯಾವುದೇ ಲಸಿಕೆ ಅವಧಿ ಮೀರಿ ನಷ್ಟವಾಗದಂತೆ ಅತೀ ಜಾಗರೂಕತೆಯಿಂದ ಕ್ರಿಯಾ ಯೋಜನೆಯನ್ನು ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಕೈಗೊಳ್ಳಲಾಗಿದೆ. ಈ ಎಲ್ಲಾ ಲಸಿಕೆಗಳ ದಾಸ್ತಾನು ವರದಿಯನ್ನು ಇ-ವಿನ್ ಪೋರ್ಟಲ್‌ನಲ್ಲಿ ಇಂದೀಕರಿಸಲಾಗಿರುತ್ತದೆ ಮತ್ತು ಲಸಿಕೆಗಳ ದಾಸ್ತಾನು ಮತ್ತು Expiry ದಿನಾಂಕವನ್ನು ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. |
| ಇ) | ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ನೀಡುವ ಯೋಜನೆ ಇದೆಯೇ; ಇದ್ದಲ್ಲಿ, ಎಷ್ಟು ದರವನ್ನು ನಿಗಧಿಪಡಿಸಲಾಗುವುದು; 24x7 ಲಸಿಕೆ ನೀಡುವ ಯೋಜನೆ ಸರ್ಕಾರಕ್ಕಿದೆಯೇ; ಇಲ್ಲವಾದಲ್ಲಿ, ಕಾರಣವೇನು; ಯಾವಾಗ ಪ್ರಾರಂಭಿಸಲಾಗುವುದು? | ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ನೀಡಲಾಗುತ್ತಿದೆ. ಸರ್ಕಾರದ ಮಾರ್ಗಸೂಚಿಯಂತೆ PM-JAY, CGHS ಮತ್ತು AB-Ark ಯೋಜನೆಯಡಿಯಲ್ಲಿ ಎಂಪ್ಯಾನಲ್ ಆಗಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್-19 ಲಸಿಕಾಕರಣವನ್ನು ನಡೆಸಲಾಗುತ್ತಿದೆ ಮತ್ತು ಪ್ರತಿ ಫಲಾನುಭವಿಗೆ ಪ್ರತಿ ಡೋಸ್‌ಗೆ ರೂ.250/-ಗಳನ್ನು ನಿಗಧಿಪಡಿಸಲಾಗಿದೆ. ಸದರಿ ವಿಷಯದ ಕುರಿತು ಆರೋಗ್ಯ ಇಲಾಖೆಯ ವತಿಯಿಂದ ಖಾಸಗಿ ಆಸ್ಪತ್ರೆಗಳಲ್ಲಿ ಬೆಳಗ್ಗೆ 9.00 ಗಂಟೆಯಿಂದ ರಾತ್ರಿ 9.00 ಗಂಟೆವರೆಗೆ ಮತ್ತು ಜಿಲ್ಲಾ ಆಸ್ಪತ್ರೆ/ ವೈದ್ಯಕೀಯ ಸಂಸ್ಥೆಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆವರೆಗೆ ಕೋವಿಡ್-19 ಲಸಿಕಾಕರಣ ನಡೆಸಲು ಸೂಚನೆ ನೀಡಲಾಗಿದೆ.<br>ಕೋವಿಡ್-19 ಲಸಿಕಾಕರಣದ ನಂತರ ಒಂದು ವೇಳೆ ಯಾವುದೇ ತೀವ್ರ/ಗಂಭೀರ ಪರಿಣಾಮಗಳು ಉಂಟಾದಲ್ಲಿ ರಾತ್ರಿಯ ವೇಳೆ ನಿರ್ವಹಣೆ ಮಾಡುವುದು ಕಷ್ಟವಾಗಬಹುದು ಎಂಬುದನ್ನು ಗಮನದಲ್ಲಿರಿಸಿಕೊಂಡು ಈ ಸೂಚನೆ ನೀಡಲಾಗಿದೆ. |

**ಸಂಖ್ಯೆ: ಆಕುಕ 36 ಎಸ್.ಟಿ.ಕ್ಯೂ 2021**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.